ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 368
2) ಸದಸ್ಯರ ಹೆಸರು : ಶ್ರೀ ತಿಪ್ಪಣ್ಣ ಕಮಕನೂರ
3) ಉತ್ತರಿಸಬೇಕಾದ ದಿನಾಂಕ : 18.07.2019
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕಲಬುರಗಿಯಲ್ಲಿ ರೈಲ್ವೆ ವಿಭಾಗ ಕಛೇರಿ ಮಂಜೂರಾಗಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಈ ವಿಭಾಗ ಕಛೇರಿಗೆ ರಾಜ್ಯ ಸರ್ಕಾರ ಜಮೀನು ಮಂಜೂರು ಮಾಡಿದೆಯೇ; ಮಂಜೂರು ಮಾಡಿದ್ದಲ್ಲಿ, ಎಷ್ಟು ಎಕರೆ ಜಮೀನು ಮಂಜೂರು ಮಾಡಲಾಗಿದೆ;	ರಾಜ್ಯ ಸರ್ಕಾರದ ವತಿಯಿಂದ ರೈಲ್ವೆ ವಿಭಾಗ ಕಛೇರಿಗಾಗಿ 43ಎ-20ಗು ಜಮೀನನ್ನು ಮಂಜೂರು ಮಾಡಲಾಗಿದೆ.
ಇ)	ಈ ಜಮೀನು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆಯೇ; ಹಸ್ತಾಂತರಿಸಿದ್ದಲ್ಲಿ, ಯಾವಾಗ ಹಸ್ತಾಂತರಿಸಲಾಯಿತು;	ದಿನಾಂಕ:01.02.2014 ರಂದು ಜಮೀನನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ.
ಈ)	ರೈಲ್ವೆ ವಿಭಾಗ ಮಂಜೂರು ಮಾಡಿದ್ದರೂ ಅದು ಕಾರ್ಯರಂಭವಾಗದಿರುವುದಕ್ಕೆ ಕಾರಣವೇನು; (ವಿವರ ನೀಡುವುದು)	ರೈಲ್ವೆ ವಿಭಾಗವನ್ನು ಸ್ಥಾಪಿಸುವುದು ಕೇಂದ್ರ ಸರ್ಕಾರದ ರೈಲ್ವೆ ಮಂತ್ರಾಲಯ ವ್ಯಾಪ್ತಿಗೆ ಒಳಪಟ್ಟಿದ್ದು, ರಾಜ್ಯ ಸರ್ಕಾರದ ವತಿಯಿಂದ ರೈಲ್ವೆ ಇಲಾಖೆಗೆ ಎಲ್ಲಾ ರೀತಿಯ ಅಗತ್ಯ ಸಹಕಾರವನ್ನು ನೀಡಿರುವುದರೊಂದಿಗೆ ಜಮೀನನ್ನು ಸಹ ಈಗಾಗಲೇ ಉಚಿತವಾಗಿ ಒದಗಿಸಲಾಗಿರುತ್ತದೆ.
ಉ)	ರೈಲ್ವೆ ವಿಭಾಗ ಮಂಜೂರಾತಿಗಾಗಿ ಕೇಂದ್ರದ ಮೇಲೆ ಒತ್ತಡ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	

ಸಂಖ್ಯೆ: ಮೂಅಇ 55 ರಾರಾಹೆ 2019/e

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ